

» ಎನ್. ನಾರಾಯಣ ಬಲ್ಲಾಳ

ಹಳೆ ಕಥೆ

ಟಾಮಿ

ನಾವು ಈ ಮನೆಗೆ ಬರುವಾಗಲೇ ಟಾಮಿ ಇಲ್ಲಿದ್ದಿತು. ನಾವಿದ್ದ ಮನೆಯೂ ದೊಡ್ಡ ಕಂಪೌಂಡಿನಲ್ಲಿದೆ. ಕಂಪೌಂಡೆಂದರೆ ಎದುರು ಬದಿ ರಸ್ತೆ. ರಸ್ತೆಗೆ ಹೊಂದಿಕೊಂಡು ಅದಕ್ಕೇ ಮುಖಮಾಡಿ ಒಂದೇ ತರಹದ ನಾಲ್ಕು ಮನೆಗಳು. ಮನೆಯ ಹಿಂಬದಿ ಒಂದು ಅಗಲ - ಕಿರಿದಾದ ಅಂಗಳ. ನಾಲ್ಕು ಮನೆಯನ್ನು ದಾಟಿ ಕೊನೆಯಲ್ಲಿ ಬಾವಿ. ಮನೆಯ ಹಿಂದುಗಡೆಯ ಅಗಲ- ಕಿರಿದಾದ ಜಗುಲಿಯೂ ಬಾವಿಗೆ ಹೋಗಿ ಬರುವವರಿಗೆ ಫುಟ್‌ಪಾತ್, ಅಂಗಳದ ಒಂದು ಬದಿಯಲ್ಲಿ ನಾಲ್ಕು ಮನೆಗಳಿಗೂ ಬೇರೆ-ಬೇರೆ ಕಕ್ಕಸು. ಎರಡು ಮನೆಗಳ ಮಧ್ಯೆ ಒಂದಷ್ಟು ಜಾಗ ಬಿಟ್ಟಿದ್ದರು. ಈ ದಾರಿಯಲ್ಲೇ ನಾವೆಲ್ಲ ಕಟ್ಟಿಗೆ ಮುಂತಾದ ಸಾಮಾನುಗಳನ್ನು ಹಿಂಬಾಗಿಲಿನಿಂದ ಸಾಗಿಸುತ್ತಿದ್ದೆವು. ಈ ಕಡೆಯಲ್ಲೇ ನಾಲ್ಕು ಮನೆಯವರಿಗೂ ಒಂದು ತುಳಸಿಕಟ್ಟೆ ಸ್ಥಾಪಿಸಿಕೊಂಡಿದ್ದೆವು. ಈ ಮನೆಯ ರೀತಿ, ಅಚ್ಚುಕಟ್ಟು ನೋಡುವಾಗ ದೊಡ್ಡ ಶಹರಿನ ನೆನಪಾಗುತ್ತಿತ್ತು.

ಟಾಮಿ ಈ ಎರಡು ಮನೆಗಳ ಮಧ್ಯದ ಎಡೆಯಲ್ಲೇ ಯಾವಾಗಲೂ ಬಿದ್ದಿರುತ್ತಿತ್ತು. ಆ ಎಡೆಗೆ ಒಂದು ದೊಡ್ಡ ಗೇಟ್ ಇದ್ದುದರಿಂದ ನಾಯಿಯ ವಾಸ್ತವ್ಯಕ್ಕೆ ಈ ಅಂಗಣ ಒಂದು ರೀತಿಯಲ್ಲಿ ಭದ್ರವೇ ಆಗಿತ್ತು. ಮಳೆಗಾಲದ ದಿನಗಳಲ್ಲಿ ನಾಯಿ ಇಲ್ಲಿಂದ ಹಿಂಬದಿಯ ಜಗಲಿಯಲ್ಲೋ ಕಕ್ಕಸಿನ ಒಳಗಡೆಯೋ ಇರುತ್ತಿದ್ದುದೂ ಉಂಟು. ಟಾಮಿ ಹೇಳುವಷ್ಟು ಚೆನ್ನಾಗಿರುವ ನಾಯಿಯಲ್ಲ. ಅದರದು ಕಡು ಕೆಂಪು ಬಣ್ಣ. ದಪ್ಪ, ಪುಷ್ಟವಾಗಿಯೇನೋ ಇದ್ದಿತು. ಊರ ಬೀಡಾಡಿ ನಾಯಿ ಕೊಬ್ಬಿಕೊಂಡಿದ್ದರೆ ಹೇಗೆ ಕಾಣಬಹುದು? ಆದರೂ ಅದು ನಮ್ಮ ನಾಲ್ಕು ಮನೆಗಳ ನಿಷ್ಠಾವಂತ ಕಾವಲುಗಾರನಾಗಿದ್ದಿತು. ನಾವು ತಿಂದುಂಡು ಬಿಟ್ಟ ಆಹಾರವನ್ನು ತಿನ್ನಲು ಅದು ತಪ್ಪದೆ ಹಾಜರು. ಆದರೆ ಕಾಂಪೌಂಡಿನೊಳಗೆ ಅಪರಿಚಿತರು, ಬಂದರೆ ಅದರ ಗಲಾಟೆ ಅಷ್ಟಿಷ್ಟಲ್ಲ. ಎರಡು ಕಾಲುಗಳನ್ನು ಅವರ ಮೈಮೇಲಿಟ್ಟು ಬೊಗಳ ತೊಡಗಿತೆಂದರೆ ಬಂದವರು ಅರೆ ಜೀವವಾಗಿ ಬಿಡುತ್ತಿದ್ದರು. ಹೀಗಾಗಿ ನಮ್ಮ ಮನೆಗೆ ಅಕಸ್ಮಾತ್ ಹೊರಗಿನವರು ತಿಳಿಯದೆ ಬಂದರೆ ಅವರಿಗೊಂದು ಗತಿಯೇ ಆಗುತ್ತಿತ್ತು.

ನಾಯಿಯ ಈ ಉಪಟಳದಿಂದ ನಮ್ಮ ಎಷ್ಟೋ ನೆಂಟರಿಗೇ ಬೇಸರವಾದುದಿದೆ. ಅದಕ್ಕಾಗಿ ನಾವೆಷ್ಟೋ ಬಾರಿ ಅದನ್ನ ಕೋಲು ಹಿಡಿದು ಹೊಡೆದುದೂ ಉಂಟು; ಜಾಡಿಸಿದುದೂ ಇದೆ. ಆದರೆ ಅದು ಪುನಃ ಪುನಃ ಬಾಲವನ್ನು ಮಡಚಿ ಕುಂಗುಟ್ಟುತ್ತಾ, ತಲೆ ಅಡಿ ಬಿಟ್ಟುಕೊಂಡು ನಮ್ಮನ್ನ ಸುತ್ತು ಹಾಕುವಾಗ ನಮಗೆಷ್ಟೋ ಸಮಾಧಾನವಾಗುತ್ತಿತ್ತು.

ಟಾಮಿಗೆ ನಾವೇನೂ ಹೇಳಿಕೊಳ್ಳುವ ಪ್ರೀತಿ ಮಾಡುತ್ತಿರಲಿಲ್ಲ. ಒಂದು ದಿನವೂ ಅದನ್ನು ಅಡಿಸಿದವರಿಲ್ಲ. ಆ ತುಂಟ ನಾಯಿಯ ಮೇಲೆ ಪ್ರೀತಿ ಹುಟ್ಟುವಂತಹ ಯಾವ ಲಕ್ಷಣವೂ ನಮಗೆ ಕಾಣುತ್ತಿರಲಿಲ್ಲ. ಆದರೆ ಅದು ನಮ್ಮನ್ನು ನೆಚ್ಚಿಕೊಂಡಿದ್ದ ರೀತಿಗೆ ಮಾತ್ರ ನಮಗೆ ಅದರ ಮೇಲೆ ಯಾವುದೋ ಒಂದು ಅವ್ಯಕ್ತ ವಿಶ್ವಾಸ ಹುಟ್ಟುತ್ತಿತ್ತು. ಟಾಮಿಯನ್ನು ಮುನಿಸಿಪಾಲಿಟಿಯವರು ಎಷ್ಟೋ ಬಾರಿ ಹಿಡಿಯಲು ಯತ್ನಿಸಿದ್ದುಂಟು. ಅದು ಬಹು ಚುರುಕು ಬುದ್ಧಿಯದು. ಒಂದು ಬಾರಿ ಆ ನಾಯಿ ಹಿಡಿಯುವವರ ಸರಿಗೆ ತಪ್ಪಿಸಿಕೊಂಡ ಅನುಭವದಿಂದಾಗಿ ಯಾವಾಗಲೂ ಅದು ಜಾಗ್ರತೆಯಿಂದಲೇ ಇರುತ್ತಿತ್ತು. ಆ ಒಂದು ಹೆದರಿಕೆಯಿಂದಲೇ ಸ್ವಲ್ಪ ಹರಕು ವಸ್ತ್ರದವರನ್ನು, ಕೈಯಲ್ಲಿ ಕೋಲು -ಸರಿಗೆ ಹಿಡಿದುಕೊಂಡವರನ್ನು ಕಂಡರೆ ಒಂದು ವಿಕಾರ ಸ್ವರದಲ್ಲಿ ಕರ್ಕಶವಾಗಿ ಕೂಗುತ್ತಿತು. ಇದರಿಂದ ದಾರಿಹೋಕರನೇಕರು ಹೆದರಿ ಈ ನಾಯಿಯ ಬಗ್ಗೆ ನಮಗೆದೂರಿತ್ತುದೂ ಇದೆ. ಇನ್ನು ಕೆಲವು ತಿಳಿಗೇಡಿ ಹುಡುಗರು ತಮ್ಮ ಸ್ವಭಾವದಂತೆ ಈ ನಾಯಿಗೆ ಎಲ್ಲೋ ಕಲ್ಲಿನಿಂದ ಹೊಡೆದಿರಬೇಕು. ಸಣ್ಣ ಮಕ್ಕಳು ಓಡುವುದನ್ನು ಕಂಡರೆ ಇದು ರೇಗಿ ಬಿದ್ದು ಅವರನ್ನು ಓಡಿಸುವುದೂ ಉಂಟು. ಆದರೆ ಈವರೆಗೆ ಟಾಮಿ ಯಾರನ್ನಾದರೂ ಕಚ್ಚುವುದಾಗಲೀ ಪರಚುವುದಾಗಲೀ ಇಲ್ಲ. ಅನಾವಶ್ಯಕ ಹೆದರಿಕೆಯಿಂದ ಓಡಿ ಹಾರಿ ಕೈಕಾಲು ನೋವು ಮಾಡಿಕೊಂಡವರಿರಬಹುದು. ಅದೊಂದು ಟಾಮಿಯ ಅಪರಾಧ ಹೇಗಾಗಬಹುದು?

ಟಾಮಿ ಸ್ವಭಾವತಃ ಸಮಾಧಾನಿ. ನಮ್ಮ ಮನೆ ಸಾಲಿನ ಕಾಂಪೌಂಡಿನಲ್ಲೆಲ್ಲಾದರೂ ಒಂದು ಬೆಚ್ಚಗಿನ ಸ್ಥಳದಲ್ಲಿ ಬಿದ್ದುಕೊಂಡಿರುತ್ತದೆ. ಯಾರಾದರೂ ಪಾತ್ರೆಯ ಶಬ್ದ ಮಾಡಿದರೆ ಅಲ್ಲಿಗೆ ಓಡಿ ಬರುತ್ತದೆ. ಅದು ಆಹಾರವಲ್ಲವೆಂತ ತಿಳಿದರೆ ಬಂದಹಾಗೆಯೆ ಹಿಂದೆ ಹೋಗುತ್ತದೆ. ಹೊರತು ಕರಕರೆ ಕೊಡುವ ಬುದ್ಧಿ ಅದಕ್ಕಿರಲಿಲ್ಲ. ದಿನಗಟ್ಟಲೆ ಅನ್ನ ಹಾಕದಿದ್ದರೂ, ಅದು ಚಕಾರ ಶಬ್ದವೆತ್ತದೆ ಎಲ್ಲಾದರೂ ಹೊರಗೆ ಹೋಗಿ ಹೊಟ್ಟೆ ತುಂಬಿಸಿಕೊಂಡು ಬರುತ್ತಿತ್ತೇ ಹೊರತು ಮನೆಯವರನ್ನು ಪೀಡಿಸಿದ್ದು ಇಲ್ಲ.

ಹಾಗೆಂದು ಟಾಮಿ ತುಂಬಾ ಸ್ವಾಭಿಮಾನಿ. ಅದು ಈ ಕಾಂಪೌಂಡಿಗೆ ಅಪರಿಚಿತ ಜನರನ್ನು ಬರಲು ಬಿಡುವುದಿಲ್ಲ ಹೇಗೋ, ಹಾಗೆಯೇ ಬೇರೆ ನಾಯಿಗಳನ್ನು ಬಿಡುವುದೂ ಇಲ್ಲ. ಎಲ್ಲಾದರೂ ಅಕಸ್ಮಾತ್ ಯಾವುದಾದರೂ ನಾಯಿ ಬಂದರೆ ಅದು ಹೊರಗೆ ದಾಟುವ ತನಕವೂ ಗಲಾಟೆ ಎಬ್ಬಿಸುತ್ತದೆ. ಎಷ್ಟೋ ನಾಯಿಗಳನ್ನು ಕಚ್ಚಿ, ಪರಚಿ ಓಡಿಸಿದುದೂ ಉಂಟು. ಆಗ ಅದರ ಉಗ್ರಾವತಾರ ನೋಡಬೇಕು. ಈ ನಾಯಿಗಳ ಗಲಾಟೆ ನೋಡಿದಾಗ ನನಗೆ ಕರೆ ಕರೆಯಾಗಿ ಎರಡು ನಾಯಿಗಳನ್ನು ಓಡಿಸಿದ್ದೂ ಉಂಟು. ಹಾಗೆಂದು ನಮ್ಮ ಸಾಲಿನ ಮನೆಗಳವರು ಸಾಕುವ ಬೆಕ್ಕು ಮುಂತಾದ ಪ್ರಾಣಿಗಳ ತಂಟೆಗೆ ಅದು ಬರುವುದಿಲ್ಲ. ನಮ್ಮ ಮನೆಯ ಬಿಲ್ಲಿಯಂತೂ ಟಾಮಿಯೊಟ್ಟಿಗೆ ಬಿಸಿಲಿಗೆ ಮೈಒಡ್ಡಿ, ತುಳಸಿಕಟ್ಟೆ ಬುಡದಲ್ಲಿ ಮಲಗಿಕೊಂಡಿದ್ದುದನ್ನು ನಾವು ನೋಡುವುದು ಸಾಮಾನ್ಯವಾಗಿದ್ದಿತು.

ಟಾಮಿಯನ್ನು ನಮ್ಮ ಮೂರು ವರ್ಷದ ಮಗು ಪೀಡಿಸಿದಷ್ಟು ಮತ್ತಾರು ಪೀಡಿಸುತ್ತಿರಲಿಲ್ಲ. ಆ ನಾಯಿಯ ಮೇಲೆ ಹತ್ತುವುದು, ಅದರ ಕಿವಿ ಹಿಂಡಿವುದು, ಬಾಲ ಹಿಡಿದೆಳೆಯುವುದು ನಮ್ಮ ಮಗುವಿಗೆ ಸಾಮಾನ್ಯ ಆಟ. ಆದರೆ ನಮ್ಮ ಮಗು ಏನು ಮಾಡಿದರೂ ಒಂದು ಬಾರಿಯೂ ನಾಯಿ ಗದರಿಸಿದ್ದಿಲ್ಲ. ನಾವೇ ನಾಯಿಗೆ ಮಗು ಕೊಡುವ ಪೀಡೆ ನೋಡಲಾರದೆ ಮಗುವನ್ನೆ ಎಳೆದು ತಂದುದುಂಟು. ಆದರೆ ಮಗು ತೋಮಿ ತೋಮಿ ಎಂದು ಕರೆದಾಕ್ಷಣ ಟಾಮಿ ಹಾಜರು. ಪೀಡೆಯಲ್ಲೂ ಅದಕ್ಕೊಂದು ಆನಂದವಿದ್ದಿತೇನೋ?

ಉಮೇಶ - ಇದು ನಮ್ಮ ಮಗುವಿನ ಹೆಸರು. ನಾಯಿಯನ್ನು ಪ್ರೀತಿಸುತ್ತಿದ್ದ. ಅವನಿಗೆ ಹೆದರಿಕೆ ಕಡಿಮೆ. ಆ ನಾಯಿ ಮಲಗಿದ್ದಲ್ಲಿ ಹೋಗಿ ಇವನೂ ಮಲಗಿ, ಆದೋ ಬಾಯಯೊಳಗೆ ಕೈ ಹಾಕುತ ಆಡುತ್ತಿದ್ದುದೂ ಇದೆ. ಆಗಲೂ ಅದು ಏನು ಉಪದ್ರ ಕೊಟ್ಟುದಿಲ್ಲ. ಎಲ್ಲಾದರೂ ಕಣ್ಣಿಗೆ ಕೈ ಹಾಕ ಬಂದರೆ ಅದು ದೂರ ಓಡುತ್ತಿತ್ತು. ಉಮೇಶನಾದರರೂ ಮನೆಯಲ್ಲಿ ಏನೇ ತಿಂಡಿ ಮಾಡಲಿ ಅವನಿಗೆಸಿಗುವಂತಿದ್ದರೆ ಅದನ್ನು ತೆಗೆದು ನಾಯಿಗೆ ಕೊಡುತ್ತಿದ್ದ, ಅವನಿಗೆ ಯಾರ ಅಪ್ಪಣೆಯೂ ಬೇಕಿರಲಿಲ್ಲ. ಒಂದು ದಿನ ಯಾರೋ ನೆಂಟರು ಬರುತ್ತಾರೆಂದು ನಾನು ಹೋಟೆಲಿನಿಂದ ಒಂದು ಹಲ್ವದ ಕಟ್ಟು ತಂದಿಟ್ಟಿದ್ದೆ. ಅಡುಗೆ ಮನೆಯಲ್ಲಿ ಯಾರೂ ಇರಲಿಲ್ಲ. ಉಮೇಶ ಏಕೋ ಅಡುಗೆ ಮನೆಗೆ ಹೋದವನಿಗೆ ಈ ಕಟ್ಟು ಕಂಡಿರಬೇಕು. ಸರಿ ಕಟ್ಟು, ಬಿಡಿಸಿದವನೇ ಅದರಲ್ಲಿದ್ದ ಹಲ್ವದ ತುಂಡುಗಳನು ಹೊತ್ತು ಪೂರ್ಣ ಟಾಮಿಗೆ ಹಾಕಿಯೂ ಬಿಟ್ಟ. ಆಕಸ್ಮಾತ್ ಅವನ ತಾಯಿ ಅಡುಗೆ ಮನೆಗೆ ಬರುತ್ತಾಳೆ. ಹೊರ ಬಾಗಿಲಲ್ಲಿ ಟಾಮಿ ಮತ್ತು ಉಮೇಶ ಹಲ್ವ ತಿನ್ನುತ್ತಿದ್ದಾರೆ. ತಾಯಿ ಸಿಟ್ಟಿನಿಂದ ಟಾಮಿಗೆ ಹೊಡೆದಳು. ಆದರೆ ಉಮೇಶನ ತಪ್ಪು; ಏನು ಮಾಡಲಿಕ್ಕಾಗುತ್ತದೆ?

ಒಂದು ರಾತ್ರಿ ಆ ಎಡೆಯ ಅಂಗಳದಲ್ಲಿ ಯಾವುದೋ ಪರದಾಟದ ಸದ್ದು ಕೇಳಿ ಬರತೊಡಗಿತು... ಸಾಮಾನ್ಯವಾಗಿ ಟಾಮಿ ಆ ರೀತಿ ಸದ್ದು ಮಾಡುವುದಿಲ್ಲ. ಆ ಎಡೆಯ ಅಂಗಳದ ಒಂದು ಬದಿಯೇ ನಮ್ಮ ಮನೆಯಾದ್ದರಿಂದ ಆ ಎಡೆಗೆ ಯಾರೂ ಬಂದರೆಂದು ನಾನು ಕಿಟಕಿ ಬಾಗಿಲು ತೆಗೆದು ಹಣಕಿದೆ. ಟಾಮಿ ಮತ್ತೊಂದು ಹೆಣ್ಣು ನಾಯಿಯೊಂದಿಗೆ ಲಲ್ಲೆಯಾಡುತ್ತಿದೆ. ಬಂದ ನಾಯಿ ತೆಳು ಕಂದು ಮಿಶ್ರಿತ ಬಿಳಿ ಬಣ್ಣದ್ದು. ಸಾಮಾನ್ಯವಾಗಿ ಟಾಮಿ ಯಾರಿಗೂ ಒಳಪ್ರದೇಶಕ್ಕೆ ಬಿಡದಿರುವಂತಹುದು. ಈ ರೀತಿ ಒಂದೇ ಸಮನೆ ಸ್ನೇಹಕ್ಕೆ ಮೊದಲು ಮಾಡಿದೆಯಲ್ಲ; ಅದೊಂದು ಜೀವನ ಸಂಗಾತಿಯನ್ನು ಪ್ರೇಮಿಸತೊಡಗಿತ್ತು. ಆ ಎರಡು ನಾಯಿಗಳ ಪ್ರೇಮ ಸಲ್ಲಾಪಕ್ಕೆ ತೊಂದರೆ ಏಕೆಂದು ನಾನು ಕಿಟಕಿ ಬಾಗಿಲು ಮುಚ್ಚಿದೆ...

ಮರುದಿನ ನಸುಕಿನಲ್ಲೇ ನಮ್ಮ ಮನೆ ವಠಾರದಲ್ಲೇ ಭಾರಿ ಗಲಾಟೆ. ನಾಯಿಗಳ ದೊಡ್ಡ ಹಿಂಡೇ ಹಿಂಡು. ಅವುಗಳ ಬೊಬ್ಬೆ ಅಸಹ್ಯವೆನಿಸುತ್ತಿತ್ತು. ಏಳೆಂಟು ಊರ ನಾಯಿಗಳು ಟಾಮಿಯ ಹಿಂದೆ ಬಂದ ಆ ಹೆಣ್ಣು ನಾಯಿಗಾಗಿ ಬೊಬ್ಬೆಯಿಡುತ್ತಿದ್ದವು. ಟಾಮಿಯಾದರೂ ಈ ಎಲ್ಲಾ ನಾಯಿಗಳಿಗೆ ಏಕೆ ಪಕ್ಷವಾಗಿ ನಿಂತು ಪ್ರತಿಭಟನೆ ನೀಡುತ್ತಿದ್ದಿತು. ಆ ಹೆಣ್ಣು ನಾಯಿ ಟಾಮಿಯ ಹಿಂದೆ ನಿಂತು ಅದರ ದೇಹವನ್ನು ಪ್ರೀತಿಯಿಂದ ನೆಕ್ಕುತಲಿತ್ತು. ಆದರೆ ಯಾವ ನಾಯಿಗಳಿಗೂ ಟಾಮಿ ಇದ್ದ ಕಾಂಪೌಂಡಿಗೆ ಗೇಟಿನ ಒಳಗೆ ಬರುವ ಧೈರ್ಯವಿಲ್ಲ. ಟಾಮಿಯ ಸಾಮ್ರಾಜ್ಯವದು! ಆದರೆ ಈ ಗಲಾಟೆ, ಬೊಬ್ಬೆ ತಡೆಯಲಾರದೆ ಸುಮ್ಮನೆ ನೆರೆಕರೆಯವರು ಕೋಲು ಹಿಡಿದುಕೊಂಡು ಬಂದ ಮೇಲೆ ಆ ಬಿಡಾಡಿ ನಾಯಿಗಳು ಪಲಾಯನ ಮಾಡಿದುವು.

ಪರಿಸ್ಥಿತಿ ಶಾಂತವಾಯಿತು. ಟಾಮಿ ಸುಮ್ಮನೆ ಮಲಗಿತು. ಅದರ ಜೀವನ ಸಂಗಾತಿ ಅದರ ಹತ್ತಿರವೇ ಅನತಿ ದೂರದಲ್ಲಿ ಮುದುಡಿಕೊಂಡಿತು. ಆದರೆ ಹೆಣ್ಣೊಂದು ಜೀವನದ ಸ್ನೇಹಿತಳಾಗಿ ಬಂದ ಮೇಲೆ ಟಾಮಿಯ ಸ್ವಭಾವ ಬದಲಾಯಿತು. ಅದು ಯಾವಾಗಲೂ ತನ್ನ ಸ್ನೇಹಿತಳ ರಕ್ಷಣೆಗಾಗಿ ಬದ್ಧವಾದಂತಿತ್ತು. ನಮ್ಮ ಮನೆಯ ಆಹಾರಕ್ಕೆ ಎರಡು ಮಂದಿ ಪಾಲುದಾರರಾದರು. ಇಲ್ಲಿಯ ಆಹಾರ ಸಾಲುತ್ತಿರಲಿಲ್ಲವಾಗಿ ಆ ಪ್ರೇಮಿಗಳು ಜೊತೆಯಾಗಿ ಕಂಪೌಂಡಿನ ಹೊರಗೆ ಹೋಗತೊಡಗಿದರು. ಸಾಮಾನ್ಯವಾಗಿ ಕಂಪೌಂಡಿನೊಳಗೇ ಇರುತ್ತಿದ್ದ ಟಾಮಿ ಈಗ ಹೊರಗಡೆಯೇ ಹೆಚ್ಚು ಕಾಲ ಇರತೊಡಗಿತು. ಹಗಲಲ್ಲಿ ಒಂದೆರಡು ಗಂಟೆಯಾದರೂ ಟಾಮಿಯೊಡನೆ ಆಡುತ್ತಿದ್ದ ನಮ್ಮ ಉಮೇಶನೂ ಆಗಾಗ 'ತೋಮಿ ಇಲ್ಲ. ತೋಮಿ ಬೇಕು' ಎನ್ನತೊಡಗುವಂತಾಯಿತು.

ಟಾಮಿಯ ಹಾಗೆ ಆ ಹೆಣ್ಣು ನಾಯಿ ಸಮಾಧಾನಿಯಲ್ಲ. ಅದು ಉಮೇಶನನ್ನು ಕಂಡಾಗ ಗುರ್ರೆನ್ನುತ್ತಿತ್ತು. ಒಂದು ಸಾರಿ ಉಮೇಶನಿಗೆ ಪರಚಿದ್ದೂ ಉಂಟು. ಮಗು ಅಳತೊಡಗಿದಾಗ ಸಿಟ್ಟುಗೊಂಡ ನನ್ನಾಕೆ ಆ ಎರಡು ನಾಯಿಗಳನ್ನು ಬಡಿದು ಓಡಿಸಿದಳು. ಒಂದು ಬಾರಿ ಇದ್ದಕ್ಕಿದ್ದ ಹಾಗೆ ಮುನಿಸಿಪಾಲಿಟಿಯ ಕೆಲಸಗಾರನೊಬ್ಬ ನಮ್ಮ ಮನೆಗೆ ಬಂದ. ನಾವು ಏನೆಂದು ವಿಚಾರಿಸಿದಾಗ ಟಾಮಿಯ ಬಗ್ಗೆ ಆಚೀಚೆ ಕಂಪೌಂಡಿನವರ ದೂರು ಬಂದಿದೆಯೆಂದೂ, ಅದು ರಾತ್ರಿ ಇಡೀ ಬೊಬ್ಬೆ ಇಡುತ್ತದೆ. ಪರಚುತ್ತದೆ ಎಂದವರು ಬರೆದಿದ್ದಾರಾಗಿಯೂ, ಆದ್ದರಿಂದ ಅದನ್ನು ಹಿಡಿಯಲು ಬಂದಿರುವುದಾಗಿಯೂ ಹೇಳಿದ.

ಟಾಮಿ ಆ ಮನುಷ್ಯನನ್ನುನೋಡಿದೊಡನೆ ಬೊಬ್ಬಿಡತೊಡಗಿತ್ತು. ಹತ್ತಿರ ಹತ್ತಿರ ಬಂದು ಎರಡು ಕಾಲೆತ್ತಿ ಕೂಗುತ್ತಿತ್ತು. ಎಲ್ಲಾದರೂ ಆತ ತನ್ನ ಕೈಯಲ್ಲಿದ್ದ ಸರಿಗೆಯ ಉರುಳನ್ನು ಬೀಸಿದನೆಂದರೆ ಟಾಮಿ ಅವನ ವಶವಾಗುವುದು ಖಂಡಿತ. ಆದರೆ ನನ್ನಾಕೆ, 'ಬಿಡಿ, ಹೋಗಲಿ ಆ ಮಾರಿಯನ್ನು ಕೊಟ್ಟು ಬಿಡಿ' ಎನ್ನುತ್ತಿದ್ದಳು. ನೆರೆಮನೆಯವರೂ 'ಅದೊಂದು ಉಪದ್ರ, ಬಿಡಿ' ಎಂದೇ ವಾದಿಸುತ್ತಿದ್ದರು. ನನಗೇಕೋ ಪ್ರಾಣದಯೆ ಬಂತು. ಟಾಮಿಯ ಮುಖದೊಂದಿಗೆ ಉಮೇಶನ ಮುಖವೂ ಕಂಡಂತಾಯಿತು. ಒಳಗೆ ಹೋಗಿ ಎರಡು ರೂಪ್ಯಾ ತಂದು ಆ ನಾಯಿಯ ಹಂತಕನ ಕೈಗೆ ಕೊಟ್ಟು ಕಳಿಸಿದೆ. ನೆರೆಮನೆಯವರ ಮನೆ ಒಳಗಿನವರ ಶಾಪವನ್ನು ಕೇಳಿದೆ.

ಆ ನಂತರ ಆ ಹಣದ ರುಚಿ ಮುನಿಸಿಪಾಲಿಟಿಯ ಈ ನಾಯಿ ಹಂತಕರಿಗೆ ತಗುಲಿರಬೇಕು. ಎರಡು ಮೂರು ಬಾರಿಯಾದರರೂ ಬೇರೆ- ಬೇರೆ ದೂರು ಹಿಡಿದುಕೊಂಡು ಬಂದು ನನ್ನೊಡನೆ ಒಂದು ರೂಪ್ಯಾ, ಎಂಟಾಣೆ, ನಾಲ್ಕಾಣೆ ತೆಗೆದುಕೊಂಡು ಹೋದದ್ದುಂಟು. ಆದರೆ ಟಾಮಿಯನ್ನು ನನಗೆ ಕೈಯಾರೆ ಕೊಲ್ಲಿಸಲು ಮನ ಒಪ್ಪಲೇ ಇಲ್ಲ.

ಟಾಮಿ ಇದ್ದಕ್ಕಿದ್ದ ಹಾಗೆ ಒಂದು ಬಾರಿ ಕಾಣೆಯಾಯಿತು. ಮೂರು ದಿನಗಳ ಬಳಿಕ ಅದು ಬಂದಾಗ ಅದರ ಕಿವಿ ಹರಿದಿತ್ತು. ಕಣ್ಣಿನ ಬದಿಯಿಂದ ರಕ್ತ ಹೆಪ್ಪು ಗಟ್ಟಿತ್ತು. ಮೈಯಲ್ಲೆಲ್ಲಾ ಪರಚಿದ ಗಾಯವಾಗಿತ್ತು. ಕೆಸರಿನಿಂದ ಅದು ಕುರೂಪುಗೊಂಡಿತ್ತು. ಹತ್ತಿರ ಬಂದರೆ ನಾರುತ್ತಿತ್ತು. ಇದಕ್ಕಿಂತಲೂ ಒಂದು ವಿಶೇಷವೆಂದರೆ ಅದು ಒಂಟಿಯಾಗಿತ್ತು. ಆ ಹೆಣ್ಣು ನಾಯಿ ಇರಲಿಲ್ಲ. ಎರಡು ತಿಂಗಳ ಕಾಲ ಒಡನಾಡುತ್ತಿದ್ದ ಆ ನಾಯಿಯನ್ನು ಕಳಕೊಂಡ ವಿರಹ ದುಃಖ ಆ ನಾಯಿಯ ಮುಖದಲ್ಲಿ ಎದ್ದು ತೋರುತ್ತಿತ್ತು. ಆ ಮೂಕ ಪ್ರಾಣಿಯು ದುಃಖಿಸುತ್ತಿತ್ತು. ಬಹುಶಃ ಆ ಹೆಣ್ಣಿಗಾಗಿ ಈ ನಾಯಿಗೂ ಕಾದಾಟವಾಗಿರಬೇಕು. ಆ ಕಾದಾಟದಲ್ಲಿ ಅದು ಬಲಿಷ್ಠವಾಗಿದ್ದು ಇದನ್ನೇ ಸೋಲಿಸಿರಬೇಕು. ಇದರಿಂದಾಗಿಯೇ ಮೈತುಂಬಾ ಗಾಯಗಳಾಗಿರಬೇಕು.

ಈ ಹಳೆಯ ಕಥೆಯು ಇಂದಿಗೂ ಆಕರ್ಷಕ. ಉಡುಪಿಯಲ್ಲಿ ನೆಲೆಸಿರುವ ಹಿರಿಯ ಕಥೆಗಾರ ಎನ್. ನಾರಾಯಣ ಬಲ್ಲಾಳರು 1960ರ ದಶಕದಲ್ಲಿ ರಚಿಸಿದ ಈ ಕಥೆಯು, 2022ರಲ್ಲಿ ಪ್ರಕಟಗೊಂಡ ಅವರ ಆಯ್ದ ಬರಹಗಳ ಸಂಕಲನ 'ನಾರಾಯಣೀಯಂ' ನಲ್ಲಿ (ಸಂಪಾದಕರು: ಡಾ. ಬಿ. ಜನಾರ್ದನ ಭಟ್) ಅಡಕಗೊಂಡಿದೆ.

ಈ ರೀತಿಯ ನಮ್ಮ ಊಹನೆ ಸರಿಯಾಗಿತ್ತು. ಈ ನಾಯಿಗೂ ಮತ್ತೊಂದು ನಾಯಿಗೂ ಗಂಟೆಗಟ್ಟಲೆ ಗುಡ್ಡೆ ಬದಿಯಲ್ಲಿ ನಿಖರದ ಕಾಳಗವಾಗುತ್ತಿದ್ದಿತೆಂದು ಅದನ್ನು ನೋಡಿದ ನಮ್ಮ ಮನೆ ಕೆಲಸದಾಕೆ ಹೇಳಿದಳು. ಟಾಮಿ ಎರಡು ದಿನ ಆಹಾರ ಮುಟ್ಟಲಿಲ್ಲ. ನನ್ನಾಕೆ ಅದರ ಹರಿದ ಕಿವಿಗೆ ಎಣ್ಣೆ ಹಚ್ಚಿದಳು. ಬರೆಯ ಮೇಲೆ ಬೂದಿ ಹಾಕಿದಳು. ಟಾಮಿ ಕಣ್ಣೀರು ಸುರಿಸುತ್ತಿತ್ತೇ ವಿನಹಾ ನೋವಿನ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತ ಪಡಿಸುತ್ತಿರಲಿಲ್ಲ.

ಇದೆಲ್ಲಾ ಎರಡು ಮೂರು ದಿನಗಳ ಕಾಲ ಮಾತ್ರ. ಟಾಮಿ ಆ ಮೇಲೆ ಸರಿಯಾಯಿತು. ಮೊದಲಿನಂತೆ ಅದು ಓಡಾಡತೊಡಗಿತು.

ಆಹಾರ ತಿನ್ನತೊಡಗಿತು. ಉಮೇಶನೊಂದಿಗೆ ಆಡಲೂ ತೊಡಗಿತು. ನನ್ನಾಕೆ ಮಾರನೇ ದಿನ ಓಡಿ ಬಂದು ಹೇಳಿದಳು. 'ಈಗ ಟಾಮಿ ಪಾಪ, ಅನ್ನ ತಿನ್ನುತ್ತದೆ' ಅವಳ ಸಂತೋಷ ಕಂಡು ನನಗೆ ನಗು ಬಂದಿತು. ಜೀವನದಲ್ಲೂ ಹಲವಾರು ಮಾರ್ಪಾಡುಗಳಾಗುತ್ತದೆ.

ಸುಮಾರು ಮೂರು ತಿಂಗಳು ಸಂದಿರಬಹುದು. ಪುನಃ ಒಂದು ದಿನ ಆ ಹೆಣ್ಣು ನಾಯಿಯೂ ಹಾಜರು! ಆದರೆ ಈ ಬಾರಿ ಅದರೊಂದಿಗೆ ಮತ್ತೊಂದು ದೈತ್ಯನಾಯಿ ಹಿಂಬಾಲಿಸಿದ್ದಿತು. ಗುರ್ ಗುಟ್ಟಲು ಸದ್ದು ಕೇಳಿ ನಾನು ಹೊರಗೆ ಹೋದಾಗ ನಮ್ಮ ಟಾಮಿ ತುಂಬಿದ ಆವೇಶದಿಂದ ಆ ದೈತ್ಯ ನಾಯಿಯನ್ನು ಸದೆ ಬಡಿಯಲು ಸನ್ನದ್ಧವಾಗುತ್ತಿತ್ತು. ನಮ್ಮ ಟಾಮಿಗಿಂತಲೂ ಅದು ಗಾತ್ರದಲ್ಲೂ, ನೋಟದಲ್ಲೂ ಭಯಂಕರವಾಗಿತ್ತು. ಬಂದ ನಾಯಿ ನೋಡಲು ಅಸಹ್ಯವಾಗಿದ್ದರೂ, ಹೆದರಿಕೆ ಹುಟ್ಟಿಸುವಂತಹ ರೂಪ ಅದರದ್ದು. ಅದರ ಒಂದು ಕಣ್ಣು ಕುರುಡಾಗಿದ್ದಿತು. ಅದೂ ಕೂಡಾ ಟಾಮಿಯ ಸೆಣಸಾಟವನ್ನು ಎದುರಿಸಲು ಸಿದ್ಧವಾದಂತಿತ್ತು. ಈವರೆಗೆ ಯಾರೂ ತೋರದಂತಹ ಧೈರ್ಯದಿಂದ ಗೇಟನ್ನು ದಾಟಿ ಒಳಗೆ ನುಗ್ಗಿ ಬಂದಿದ್ದಿತು, ಆ ಕುರುಡು ನಾಯಿ! ಆದರೆ ಆ ಹೆಣ್ಣು ನಾಯಿ ಟಾಮಿಯ ಹಿಂದೆ ಅಡಗಲು ಯತ್ನಿಸುತ್ತಿದ್ದಿತು. ಆದರೆ ಆ ದೈತ್ಯನಿಗೆ ಇದರಿಂದ ಮತ್ತಷ್ಟು ಕೆರಳುತ್ತಿದ್ದಿತು. ಟಾಮಿಯ ಆವೇಶ ಹೆಚ್ಚಿದಂತೆಲ್ಲಾ ಅದು ಹಲ್ಲನ್ನು ಕಿರಿಯುತ್ತಾ, ಹಿಂದಿನ ಕಾಲಿನಿಂದ ನೆಲದ ಮಣ್ಣನ್ನು ಕೆದುಕುತ್ತಾ, ಎದುರಿನ ನಾಯಿಗೆ ಗದರಿಕೆ ಹಾಕುತ್ತಿತ್ತು. ಆ ನಾಯಿಯಾದರೂ ಅದೇ ಧಾಟಿಯಲ್ಲಿ ಪ್ರತಿ ಉತ್ತರ ಹೇಳಿ ಮುಂದುವರಿಯುತ್ತಿತ್ತು. ಹೀಗೆ ಗುರ್ ಗುರಾಟ ಹೆಚ್ಚು ಸಮಯ ನಡೆಯಲಿಲ್ಲ.

ನಾನು ನೋಡುತ್ತಿದ್ದ ಹಾಗೆ ಬರಸಿಡಿಲಿನಂತೆ ಟಾಮಿ ಆ ಕುರುಡ ನಾಯಿಯ ಮೇಲೆ ಎರಗಿತು. ಆ ನಾಯಿಯ ತಲೆಯನ್ನು ಬಲವಾಗಿ ಕಚ್ಚಿ, ಅದನ್ನು ಕೆಡವಿತು. ಒಮ್ಮೆಗೇ ಕೊಟ್ಟ ಆಘಾತದಿಂದ ಆ ದೈತ್ಯನಿಗೆ ಚೇತರಿಸಿಕೊಳ್ಳಲು ಕಷ್ಟವಾದರೂ ಮರುಗಳಿಗೆಯಲ್ಲೇ ಟಾಮಿಯ ಪೆಟ್ಟಿಗೆ ಪ್ರತಿ ಪೆಟ್ಟನ್ನಿತ್ತು, ಟಾಮಿಯನ್ನು ಕೆಡವಿ ಅದರ ಗಂಡಸ್ಥಳವನ್ನು ಬಲವಾಗಿ ಕಚ್ಚಿ ಹಿಡಿಯಿತು. ನಾಯಿಗಳೊಳಗೇ ಬೀಕರ ಕಾದಾಟವಾಯಿತು. ನೆಲದ ಮಣ್ಣು ಕೆದಕಿ ಹೊರತೊಡಗಿತು. ಬಲು ಭೀಷಣವಾಗಿ ಹೊರಳಾಟ, ಕಚ್ಚಾಟ ನಡೆಯಿತು. ಎರಡೂ ಸಮಬಲ ಪರಾಕ್ರಮಿಗಳು. ಇಬ್ಬರಿಗೂ ತುಂಬಿದ ಹುಚ್ಚು ಆವೇಶ ಬಂದಿದೆ. ಈ ಇಬ್ಬರ ಮಹಾಕಾಳಗದಲ್ಲಿ ದಿಕ್ಕುಗೇಡಿಯಾಗಿ ಟಾಮಿಯ ಹಿಂದೆ ಸುಳಿಯುತ್ತಾ ಆ ಹೆಣ್ಣುನಾಯಿ ಒದ್ದಾಡುತ್ತಿದೆ. ನಾಯಿ ಕಾಳಗವನ್ನು ಇಷ್ಟು ಭಯಂಕರವಾಗಿ ನಾವಾರು ನೋಡಿದ್ದಿಲ್ಲ. ನಮ್ಮ ನಾಯಿಯ ಕಿವಿ ಹರಿದು, ರಕ್ತ ಸೋರತೊಡಗಿತು. ದೈತ್ಯನಾಯಿಯ ಕಟ ಬಾಯಿಯಿಂದ ರಕ್ತ ತೊಟ್ಟಿಕ್ಕುತ್ತಿತ್ತು. ಆದರೂ ಇಬ್ಬರೂ ಹಿಂಜರಿಯುವ ಲಕ್ಷಣವಿಲ್ಲ. ನನಗೆ ತಡೆಯಲಾಗದೆ ಒಂದು ದೊಣ್ಣೆ ತೆಗೆದು ಹೊಡೆಯ ಹೋದೆ. ಆದರೆ ಅವುಗಳ ತೀವ್ರಾವೇಶವನ್ನು ಕಂಡು ಹತ್ತಿರ ಹೋಗಲು ನನಗೂ ಅಳು ಕಾಯಿತು. ಅಷ್ಟರಲ್ಲೇ ಆಚೀಚೆ ಮನೆಯವರು ಗುಂಪು ಕೂಡಿದರು. ಎರಡೂ ನಾಯಿಗಳೂ ಒಂದರ ಬಾಯನ್ನು ಮತ್ತೊಂದು ಕಚ್ಚಿ ಹಿಡಿದಿದ್ದುವು. ಎರಡು ನಾಯಿಗಳ ಬಾಯಿಗಳು ತೆರೆದು ಕೊಂಡಿದ್ದವು. ರಕ್ತ ತೊಟ್ಟಿಕ್ಕುತ್ತಿದ್ದರೂ ಬಿಡಲು ಸಿದ್ಧವಿಲ್ಲ. ನಾಯಿಗಳಂತೂ ಏನೂ ಶಬ್ದವನ್ನು ಮಾಡುತ್ತಿರಲಿಲ್ಲ. ಹೀಗೆ ಎಷ್ಟು ಹೊತ್ತು ಕಳೆಯಿತೋ, ದಾರಿಯ ಒಬ್ಬಿಬ್ಬರೂ ಕಲ್ಲು ಹೊಡೆದರು. ನೆರೆಮನೆಯವರು ನೀರು ಚೆಲ್ಲಿದರು. ಆದರೂ ಎರಡು ನಾಯಿಗಳ ಆವೇಶ ಇಳಿಯಲಿಲ್ಲ. ಇದ್ದಕ್ಕಿದ್ದ ಹಾಗೆ ನನಗೊಂದು ಯೋಚನೆ ಬಂದಿತು. ಆ ಹೆಣ್ಣು ನಾಯಿಯನ್ನು ಅಲ್ಲಿಂದ ಓಡಿಸಿದೆ.

ಮೊದ ಮೊದಲು ಎಷ್ಟು ಹೊಡೆದರೂ ಆ ನಾಯಿ ಟಾಮಿಯ ಹಿಂದೆಯೇ ಮತ್ತು ಓಡುತ್ತಿದ್ದರೂ, ನಾನು ಬಿಡದೆ ಅದನ್ನ ಓಡಿಸತೊಡಗಲು ಅದು ನಿರುಪಾಯವಾಗಿ ಗೇಟಿನ ಹೊರಗೆ ಓಡಲೇ ಬೇಕಾಯಿತು. ಕುರುಡು ನಾಯಿ ಆ ಹೆಣ್ಣಿನ ಮೇಲೆ ಕಣ್ಣು ನೆಟ್ಟಿದ್ದಿರಬೇಕು. ಅದು ಹೊರಗೆ ಓಡಲು ತನ್ನ ಹಿಡಿತ ಸಡಲಿಸಿ ಅದರ ಹಿಂದೆ ಓಡಲೆತ್ನಿಸಿತು. ಟಾಮಿಗೆ ಸಹನೆಯಾಗಬೇಕೆ? ಕೂಡಲೇ ಅದು ಒಂದು ಆಯತ ಪೆಟ್ಟಿನಿಂದ ಆ ಕುರುಡನ ಮತ್ತೊಂದು ಕಣ್ಣನ್ನು ಕಚ್ಚಿ ಹಿಡಿದು, ಅದರ ಮೇಲೇರಿ ಎತ್ತಿ ಕೆಡವಿತು. ಈ ನೋವು ಆ ದೈತ್ಯನಿಗೆ ಸಾಕಾಯಿತು. ಎರಡು ಕಿವಿಗಳ ಮಧ್ಯೆ ಅದರ ಹಿಡಿತ, ಹಲ್ಲಿನ ನೋವು ತಡೆಯಲಾಗದೆ ಅದು ಪ್ರಥಮ ಬಾರಿ ಗುಂಯಿಗುಟ್ಟುತ್ತಿತ್ತು. ಅಂಗಾತ ಬಿದ್ದು ಸೋಲನ್ನೊಪ್ಪಿತು. ಎರಡೂ ಕಾಲುಗಳನ್ನು ಮೇಲೆತ್ತಿ ಅಲ್ಲಾಡಿಸತೊಡಗಿತು. ಆದರೂ ಟಾಮಿಗೆ ಸಿಟ್ಟು ಇಳಿಯಲಿಲ್ಲ. ಅದರ ಹೊಟ್ಟೆಗೆ ಬಾಯಿ ಹಾಕಿ, ಕಚ್ಚಿ ಹಿಡಿದು ಎಳೆಯಿತು. ಚರ್ಮವೇ ಕಿತ್ತು ಬಂತು. ಆ ದೈತ್ಯನಾಯಿ ಹೇಗೋ ಟಾಮಿಯ ಹಿಡಿತದಿಂದ ಬಿಡಿಸಕೊಂಡು ಗೇಟು ದಾಟಿ ಓಡಿಹೋಯಿತು. ಕಾಳಗವಾದ ಜಾಗದಲ್ಲೆಲ್ಲಾ ರಕ್ತದ ಹನಿಗಳು. ಮಣ್ಣಂತೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದಿತು. ಅಲ್ಲಲ್ಲಿ ಹೊಂಡಗಳು. ಟಾಮಿ ಆ ದೈತ್ಯ ನಾಯಿಯನ್ನು ಹಿಂಬಾಲಿಸಿಕೊಂಡೇ ಹೋಯಿತು.

ನಮಗೆಲ್ಲಾ ಆಶ್ಚರ್ಯ. ನಾಯಿಗಳಿಗೂ ಇಂತಹ ಹುಚ್ಚು ಆವೇಶ ಬರುವುದಿದೆಯೇ? ಹೋರಿಗಳ ಹೋರಾಟ ಕೇಳಿದ್ದೇನೆ. ಹುಲಿಗಳೊಳಗೂ ಹೋರಾಟವು ಇದೆಯಂತೆ. ಆದರೆ ನಾಯಿಗಳ ಕಾದಾಟ ಇಷ್ಟು ಬೀಭತ್ಸವಾಗಬಹುದೆಂದು ನಾವು ಯಾರೂ ಊಹಿಸಿರಲಿಲ್ಲ. ನನಗಿಂದಿಗೂ ಅದನ್ನು ನೆನೆಸಿದರೆ ರೋಮಾಂಚನವಾಗುತ್ತದೆ. ಅದೊಂದು ರುದ್ರ, ಭಯಾನಕ ನೋಟವೇ ಸರಿ!

ಟಾಮಿ ಮಧ್ಯಾಹ್ನದ ಹೊತ್ತಿಗೆ ವಾಪಾಸು ಬಂದಿತು. ಬರುವಾಗ ಆ ಹೆಣ್ಣು ನಾಯಿಯೂ ಇದ್ದಿತು. ಟಾಮಿ ತುಂಬಾ ಬಳಲಿ, ಬೆಂಡಾಗಿದ್ದಿತು. ಮೈಮೇಲಿನ ಗಾಯದಿಂದ ತುಂಬ ನೋವಾಗುತ್ತಿರಬೇಕು. ಕೂಡಲೇ ಒಂದು ಬದಿ ಹಿಡಿದು ಮಲಗಿತು. ಹೆಣ್ಣು ನಾಯಿ ಅದರ ಮೈಯನ್ನು ಪ್ರೇಮದಿಂದ ಸವರುತ್ತಿದ್ದಿತು. ಪ್ರಾಣಿಗಳಿಗೂ ಪ್ರೇಮವೆಂದರೆ ಅದೆಷ್ಟು ಪರಿಪೂರ್ಣ! ಅದೆಷ್ಟು ತನ್ಮಯತೆ!

ಕುರುಡು ನಾಯಿ ಸಂಜೆ ಹೊತ್ತಿಗೆ ಗೇಟಿನ ಹತ್ತಿರ ಬಂದುದನ್ನು ಕಂಡು ನಾನೇ ಸಿಟ್ಟಿನಿಂದ ಹೋಗಿ ಓಡಿಸಿದೆ. ಅದು ಗೇಟಿನ ಬದಿಯಲ್ಲೇ ಅತ್ತಿತ್ತ ತಿರುಗುತ್ತಾ ಟಾಮಿಯನ್ನು ಹಾಗೂ ಆ ಹೆಣ್ಣು ನಾಯಿಯನ್ನು ಒಕ್ಕಣ್ಣಿನಿಂದ ದೃಷ್ಟಿಸುತ್ತಿದ್ದಿತು. ಆದರೆ ಒಳಗೆ ಬರುತ್ತಿರಲಿಲ್ಲ. ಟಾಮಿ ಕೂಡಾ ಅದನ್ನು ಕಂಡರೂ ನಿರ್ಲಕ್ಷವಾಗಿದ್ದಿತು. ಹೀಗೆ ಎರಡು ದಿನ ಕಳೆಯಿತು. ಕುರುಡು ನಾಯಿ ಗೇಟಿನ ಹೊರಗೇ ತಿರುಗುವುದು ಹೆಚ್ಚಾಯಿತು.

ಆ ದಿನ ಇದ್ದಕ್ಕಿದ್ದ ಹಾಗೆ ಟಾಮಿಯನ್ನು ನಮ್ಮ ರಸ್ತೆಯ ಕೊನೆಯಲ್ಲಿ ಮುನಿಸಿಪಾಲಿಟಿಯವರು ಹಿಡಿದರೆಂದೂ, ಅದನ್ನು ಆ ಕೂಡಲೇ ತಲೆಯೊಡೆದು ಹಾಕಿದರೆಂದೂ ತಿಳಿದು ನನಗೆ ತುಂಬಾ ದುಃಖವಾಯಿತು. ನನಗೆ ತಡೆಯಲೇ ಆಗಲಿಲ್ಲ. ನೆಟ್ಟಗೆ ರಸ್ತೆಯ ಕೊನೆಗೆ ಓಡಿದೆ. ಅಲ್ಲಿ ಏಳೆಂಟು ಮಂದಿ ಮುನಿಸಿಪಾಲಿಟಿಯ ಜನ ತುಳುವಿನಲ್ಲಿ ಏನೇನೋ ಹೇಳುತ್ತಿದ್ದರು. ನನ್ನೊಡನೆ ಎರಡು ರೂಪ್ಯಾ ತೆಗೆದುಕೊಂಡವನೇ ಟಾಮಿಯ ಹೆಣವನ್ನು ಕಾಲಿನಿಂದ ದೂರ ಮಾಡುತ್ತಿದ್ದ. ಟಾಮಿಯ ತಲೆಯೊಡೆದು ರಕ್ತ ಸೋರುತ್ತಿತ್ತು. ಅದು ಅಸಹಾಯಕವಾಗಿ ಬಿದ್ದಿದ್ದಿತು.

ಸಾಯುವ ಮೊದಲು ತುಂಬಾ ಒದ್ದಾಡಿರಬೇಕು. ಅದು ಬಿದ್ದಿಲ್ಲ ನೆಲದ ಮಣ್ಣೆಲ್ಲಾ ಹಾರಿ ಹೋಗಿತ್ತು. ನನಗೆ ಟಾಮಿಯನ್ನು ನೋಡಲಾಗಲಿಲ್ಲ. ಕಣ್ಮುಚ್ಚಿದೆ. ಎರಡು ತೊಟ್ಟು ನೀರು ಬಂದಿತು. ಕಣ್ಣು ಮಂಜಾಯಿತು.

ಆ ನಾಯಿ ಕೊಂದವರಲ್ಲಿ ಒಬ್ಬ ಹೇಳಿದ: 'ಅಯ್ಯ! ನಾವು ಅದನ್ನು ಕೊಲ್ಲುತ್ತಿರಲಿಲ್ಲ. ನಿನ್ನೆ ಸಂಜೆ ನಮ್ಮ ಮನೆ ದಾರಿಯಿಂದಾಗಿ ನಾವು ಮನೆಗೆ ಹೋಗುವಾಗ ಇವನಿಗೆ ಬೇಕೆಂದೇ ಹಾರಿ, ಕಚ್ಚಿ ಬಿಟ್ಟಿತು. ನೋಡಿ, ಅವನ ಕೈಅವನಿಗೆ ಇಂಜೆಕ್ಷನ್ ಕೊಡಬೇಕಂತೆ. ಕೈಯ ಮಾಂಸವನ್ನೇ ಹರಿದು ಬಿಟ್ಟಿದೆ.'

ಟಾಮಿಯ ಮೇಲೆ ಹಾಕಲಾದ ಈ ಅನಿರೀಕ್ಷಿತ ಅಪರಾಧವನ್ನು ಸ್ವೀಕರಿಸಲು ನಾನು ಸಿದ್ಧನಿರಲಿಲ್ಲ. ಆದರೆ ನಾನು ಯಾವ ರೀತಿ ಅದನ್ನು ಪ್ರತಿಭಟಿಸಲಿ? 'ಈವರೆಗೆ ಆ ನಾಯಿ ಯಾರಿಗೂ ಕಚ್ಚಿದ್ದಿಲ್ಲ' ಎಂದಷ್ಟೇ ಹೇಳಿದೆ.

'ಇಲ್ಲ, ಅಯ್ಯಾ! ನಿನ್ನೆ ನಾವು ಮೂವರು ಬರುತ್ತಿದ್ದೆವು. ಮಬ್ಬು ಕತ್ತಲಾಗಿತ್ತು. ಈ ನಾಯಿ ಹಾರಿ ಬಂದು ನನ್ನನ್ನು ಕಚ್ಚಿ, ಈ ಗೇಟಿನೊಳಗೇ ಹಾರಿ ಹೋಯಿತು. ಆಗಲೇ ನಾವು ಅದನ್ನು ಕೊಲ್ಲುವವರು. ಆದರೆ ರಾತ್ರಿಯಾಯಿತೆಂತ ಬಿಟ್ಟೆವು. ಈ ದಿನ ಇಲ್ಲೇ ಸಿಕ್ಕಿತು. ಕರಕರೆ, ಅಲ್ಲಿಯವರಿಗೆಲ್ಲಾ ಉಪದ್ರ. ನಿಮ್ಗೆ ಒಳ್ಳೇ ಜಾತಿಯ ನಾಯಿ ಮರಿ ಬೇಕಾದರೆ ತಂದು ಕೊಡುತ್ತೇನೆ'.

'ನನಗೆ ನಾಯಿ ಬೇಕಾಗಿಲ್ಲ' ಎಂದಷ್ಟೇ ಹೇಳಿ ನಾನು ಹಿಂತಿರುಗಿದೆ. ಬರುವಾಗ ನನ್ನ ಕಣ್ಣು ಸಹಜವಾಗಿ ಮನೆಯ ಹತ್ತಿರದ ಗೇಟಿನ ಹತ್ತಿರ ಹೋಯಿತು. ಅಲ್ಲಿ ಟಾಮಿ ಮಲಗುವಲ್ಲಿ ಕುರುಡು ನಾಯಿ ಮಲಗಿತ್ತು. ನನಗೆಲ್ಲಿಯ ಆವೇಶ ಬಂತೋ! ಒಂದು ದೊಡ್ಡ ಕಲ್ಲನ್ನೆತ್ತಿ ಅದರ ಮೇಲೆ ಒಗೆದೆ. ಅದು ಕುಯಿಗುಟ್ಟುತ್ತಾ ಓಡಿ ಹೋಯಿತು.

ನಮ್ಮ ಮನೆಯ ಹಿಂಬದಿಯಲ್ಲಿ ಒಂದು ಸಂಸಾರ ಬಾಡಿಗೆಗೆ ಇದೆ. ಅಲ್ಲಿಯ ಕೆಲಸದವಳು ಸಂಜೆ ಬಂದವಳು ನನ್ನಾಕೆಯೊಡನೆ ಹೇಳುತ್ತಿದ್ದಳು. 'ಆ ಕುರುಡು ನಾಯಿ ಭಾರಿ ಜೋರಿದ್ದು, ಅದು ಯಾವಾಗಲೂ ಕಣ್ಣು ಹಾಕುತ್ತಿತ್ತು. ಆ ಬೊಳ್ಳಿ ಟಾಮಿಯ ಹಿಂದೆ ಓಡುತ್ತಿತ್ತು ನೋಡಿ. ಟಾಮಿಯ ಮೇಲೆ ಸಾಧನೆ ಅದಕ್ಕಿತ್ತು. ನಿನ್ನೆ ನಾನು ಮೀನು ತಂದಿದ್ದೆ. ಟಾಮಿ ಅದಕ್ಕಾಗಿ ಕಾಯುತ್ತಾ ರಾತ್ರಿ ಎಂಟು ಗಂಟೆಯ ತನಕ ಬೊಳ್ಳಿಯೊಂದಿಗೆ ನಮ್ಮಲ್ಲೇ ಇತ್ತು. ಅಷ್ಟರಲ್ಲೆ ಈ ಕುರುಡ ನಿಮ್ಮ ಪಾಗಾರ ಹಾರಿ ಓಡಿ ಬಂತು ನೋಡಿ. ನನಗೆ ಹೆದರಿಕೆಯಾಗಿ ಬಿಟ್ಟಿತು'.

ಕೊನೆಯ ಮಾತು ಕೇಳಿ ನನಗೆ ಏನೋ ಚುಚ್ಚಿದಂತಾಯಿತು. ನಾನು ಒಳಗಡೆ ಈಸಿಚೆಯರಿನಲ್ಲಿ ಬಿದ್ದು ಕೊಂಡಿದ್ದವನು ಎದ್ದು ಬಂದು, ಆಕೆಯೊಡನೆ ಕೇಳಿದೆ: 'ಟಾಮಿ ಎಷ್ಟು ಸಮಯದಿಂದ ನಿಮ್ಮಲ್ಲಿತ್ತು?'

'ಅಯ್ಯಾ! ನಾನು ಮಾರ್ಕೆಟಿನಿಂದ ನಾಲ್ಕು ಗಂಟೆಗೆ ಬಂದಿದ್ದೆ. ಮೀನಿನ ಪರಿಮಳ ಬಂದಕೂಡಲೇ ಟಾಮಿ ನಮ್ಮಲ್ಲಿ ಹಾಜರು. ಸಂಜೆ ಬಂದ ಟಾಮಿ ಎಂಟು ಗಂಟೆಯ ತನಕವೂ ನಮ್ಮಲ್ಲೇ ಬಿದ್ದುಕೊಂಡಿತ್ತು. ನಮ್ಮ ಊಟದ ಚೂರು ತಿಂದೇ ಅದ ನಿಮ್ಮಲ್ಲಿಗೆ ಹೋಗುವುದು ಅದರ ಪದ್ಧತಿ. ನಿನ್ನೆಯೂ ಅದು ಇಲ್ಲಿಂದ ಹೋಗುವಾಗ ಎಂಟು ಗಂಟೆಯಾಗಿತ್ತೇನೋ?'' ನಿನ್ನೆ ಕಚ್ಚಿದ್ದು ಟಾಮಿಯಲ್ಲವೆಂದೂ, ಆ ಕುರುಡು ನಾಯಿದ್ದೇ ಕಿತಾಪತಿ ಎಂದೂ ತಿಳಿಯಲು ನನಗೆ ಕಷ್ಟವಾಗಲಿಲ್ಲ. ಪ್ರೇಮದ ಸೇಡನ್ನು ಈ ರೀತಿಯಲ್ಲಾದರೂ ತೀರಿಸಿಕೊಂಡಿತು ಆ ದೈತ್ಯ! ಇದಾಗಿ ಒಂದು ವರ್ಷ ಉರುಳಿದೆ. ನಾನೀಗ ನಮ್ಮ ಕಂಪೌಂಡಿಗೆ ನಾಯಿ ಬಂದರೆ ಓಡಿಸುತ್ತೇನೆ. ನನಗೆ ನಾಯಿಯ ಮೇಲೆ ವೈರಾಗ್ಯವೇ ಬಂದಿದೆ!

» ಶಶಿಧರಸ್ವಾಮಿ ಆರ್. ಹಿರೇಮಠ

ಹಕ್ಕಿಯ ಹುಳಬೇಟೆ

ಮೂಡಣದಿ ಭಾಸ್ಕರನ ಉದಯವಾಗಿತ್ತು. ಪಕ್ಷಿ ಸಮೂಹದ ಚಿಲಿಪಿಲಿಯ ಗಾನ ಸುಧೆ ಪ್ರಾರಂಭಿಸಿಯಾಗಿತ್ತು. ತಂಗಾಳಿಯು ಪಕ್ಷಿ ವಿಕ್ಷಣೆಗೈಯುತ್ತಿದ್ದ ನನ್ನ ಮನಕ್ಕೆ ಮುದ ನೀಡತ್ತಿತ್ತು. ನಡೆದು ಹೋಗುತ್ತಿದ್ದವನ್ನು ನಿಲ್ಲಿಸಿದ್ದು, ಒಣಗಿ ನೆಲಕ್ಕೆ ಬಿದ್ದ ಔಡ್ಲ ಎಲೆಗಳ ರಾಶಿಯಿಂದ ತೇಲಿ ಬಂದ ಸರಸರ ಸದ್ದು.

ಶಬ್ದ ಬಂದ ಕಡೆ ನಡೆದೆ. ನೆಲದಿಂದ ಹಾರಿದ ಪಕ್ಷಿಯೊಂದು ಹರಳೆ ಗಿಡದ ಟೊಂಗೆಯ ಮೇಲೆ ಕುಳಿತುಕೊಂಡಿತು. ಗಿಡಗಳ ಮರೆಯಲ್ಲಿ ನಿಂತು ಪಕ್ಷಿಯ ಚಲನ-ವಲನ ವಿಕ್ಷಿಸುತ್ತಾ ಅದರ ಚಟುವಟಿಕೆಗಳನ್ನು ನನ್ನ ಕ್ಯಾಮರಾದಲ್ಲಿ ಸೆರೆ ಹಿಡಿಯತೊಡಗಿದೆ. ಆ ಪಕ್ಷಿ ನೆಲದ ಕಡೆಗೊಮ್ಮೆ, ಅತ್ತ-ಇತ್ತಲೊಮ್ಮೆ ನೋಡುತಿತ್ತು. ಒಮ್ಮೆಗೇ ನೆಲದತ್ತ ನೆಗೆಯಿತು. ಅದೇ ವೇಗದಲ್ಲಿ ಮತ್ತೆ ಹರಳೆ ಗಿಡದ ಟೊಂಗೆಯ ಹಾರಿ ಮೇಲೆ ಬಂದು ಕುಳಿತಾಗ ಕೊಕ್ಕಿನಲ್ಲಿ ಕಂಬಳಿಹುಳು ನೆತಾಡುತ್ತಿತ್ತು.

ನನ್ನ ಇರುವಿಕೆಯನ್ನು ಅರಿತ ಪಕ್ಷಿಯು ಕಣ್ಣಾಸ್ತ್ರಯಾಗಿ ಹೊಟ್ಟೆ ಕಟ್ಟಿತೆಂದು ನಾಚಿ ಅತ್ತ ಕಡೆ ಮುಖ ಮಾಡಿ ಕುಳಿತು ಬೇಟೆಯಾಡಿದ ಕಂಬಳಿಹುಳುವನ್ನು ಕ್ಷಣಾರ್ಧದಲ್ಲಿ ಗುಳುಂ ಮಾಡಿತು; ಈ ಎಲ್ಲ ದೃಶ್ಯಗಳನ್ನು ನಾನು ನನ್ನ ಕ್ಯಾಮರಾದಲ್ಲಿ ಕ್ಲಿಕ್ಕಿಸಿದೆ.



ಕೋಗಿಲೆ ಚಾಣವನ್ನು ಗಿಡುಗ ಕೋಗಿಲೆ, ಪ್ರಖ್ಯಾತ ಚಾತಕ ಎಂತಲೂ ಕರೆದು, ಆಂಗ್ಲಭಾಷೆಯಲ್ಲಿ 'ಕಾಮನ್ ಹಾಕ್ ಕುಕೂ' ಎಂದು ಕರೆಯುತ್ತಾರೆ. ಇವನ್ನು ಈ ಮೊದಲು ಬ್ರೆನ್ ಫೀವರ್ ಬರ್ಡ್ ಎನ್ನುತ್ತಿದ್ದರು. ಕೂಗು ಪುನರಾವರ್ತಿತ ಮೂರು ಟಿಪ್ಪಣಿ ಕರೆಗಳು ಬ್ರೆನ್ ಫೀವರ್ ಎಂದು ಹೇಳೀದಂತಿರುತ್ತದೆ. ಪಾರಿವಾಳ ಗಾತ್ರದ ಬೂದು ಬಣ್ಣದ ಹಕ್ಕಿ. ಮೈ ಎಲ್ಲಾ ಕಪ್ಪು ಇಲ್ಲವೇ ಅಚ್ಚು ಬೂದು ಬಣ್ಣ ಹೊಂದಿ, ಗದ್ದ, ಕತ್ತು, ಎದೆ, ಹೊಟ್ಟೆ ಭಾಗವು ಬಿಳಿ ವರ್ಣದಾಗಿದ್ದು, ಕಂದು ಬಣ್ಣದ ಅಡ್ಡ ಗೆರೆಗಳಿವೆ. ರೆಕ್ಕೆಗಳ ತುದಿಯು ಕಪ್ಪಾಗಿದ್ದು. ಬೂದು ಬಣ್ಣದ ಬಾಲದ ಮೇಲೆ ಕಪ್ಪು ಪಟ್ಟೆಗಳಿವೆ. ಕಪ್ಪು ಕೊಕ್ಕು ಹಾಗೂ ಹಳದಿ ಕಾಲುಗಳನ್ನು ಹೊಂದಿವೆ.

ಮಳೆ ಹಾಗೂ ಚಳಿಗಾಲದಲ್ಲಿ ಮೌನವಾಗಿರುವ ಇವು ಬೇಸಿಗೆ ಕಾಲದಲ್ಲಿ ಕೆಳ ಧ್ವನಿಯಿಂದ ಪ್ರಾರಂಭಿಸಿ ಎತ್ತರದ ಧ್ವನಿಯಿಂದ ತಿತೀ... ತಿತೀ... ತಿತೀ...ಪೀಕಹ... ಪೀಕಹ... ಎಂದು ಕೂಗುತ್ತವೆ. ಕಂಬಳಿ ಹುಳು, ಕೀಟಗಳು, ಮಿಡತೆ, ಇತರೆ ಹಕ್ಕಿಗಳ ಮೊಟ್ಟೆಗಳು ಇವುಗಳ ಆಹಾರ. ಸಂತಾನಾಶ್ರಯ ಸಮಯವು ಮಾರ್ಚ-ಜೂನ ತಿಂಗಳಾಗಿದ್ದು, ನೀಲಿ ವರ್ಣದ ಒಂದು ಮೊಟ್ಟೆಯನ್ನು ಇಡುತ್ತವೆ. ಆದರೆ ಇಲ್ಲೊಂದು ವಿಶೇಷವಿದೆ. ಇದು ತನ್ನ ಗೂಡನ್ನು ಕಟ್ಟುವುದಿಲ್ಲ, ಮೊಟ್ಟೆ ಇಡಲು ಪ್ರತ್ಯೇಕ ಜಾಗವನ್ನು ಸಹ ಹುಡುಕುವುದಿಲ್ಲ. ಬದಲಿಗೆ, ಹರಟೆ ಮಲ್ಲ ಪಕ್ಷಿಯ ಗೂಡನ್ನು ಹುಡುಕಿ, ಉಪಾಯವಾಗಿ ಆ ಹಕ್ಕಿಯ ಗೂಡಿನಲ್ಲಿ ತನ್ನ ಮೊಟ್ಟೆಯನ್ನು ಇಡುತ್ತದೆ! ಪಾಪ, ಹರಟೆ ಮಲ್ಲ ಹಕ್ಕಿಯು ತನ್ನ ಮೊಟ್ಟೆಗಳ ಜತೆ, ಈ ಹಕ್ಕಿಯ ಮೊಟ್ಟೆಯನ್ನು ಸಹ ಮರಿ ಮಾಡುತ್ತದೆ. ಬೇರೆ ಹಕ್ಕಿಯ ಗೂಡಿನಲ್ಲಿ ಮೊಟ್ಟೆ ಇಡುವ ಗೂಡಿನ ಪರತಂತ್ರ ಹಕ್ಕಿಯಾಗಿರುವ ಕೋಗಿಲೆ ಚಾಣವು 'ಬ್ರೂಡ್ ಪ್ಯಾರಾಸೈಟ್' ಎನಿಸಿದೆ.

ಈ ರೀತಿ ಬೇರೆ ಹಕ್ಕಿಯ ಗೂಡಿನಲ್ಲಿ ಮೊಟ್ಟೆಯಿಟ್ಟು, ಮರಿ ಮಾಡುವ ಇಂತಹ ಪರಾವಲಂಬಿ ಹಕ್ಕಿಗಳು ತಮ್ಮ ಮರಿಗಳನ್ನು ಬೆಳೆಸಲು ಇತರ ಹಕ್ಕಿಗಳನ್ನು ಅವಲಂಬಿಸಿವೆ. ಬೇರೆ ಪ್ರಭೇದದ ಹಕ್ಕಿಯನ್ನು ಯಾಮಾರಿಸುವುದರಲ್ಲಿ ಇವು ಚಾಣಾಕ್ಷರು! ಬೇರೊಂದು ಹಕ್ಕಿಯು ತನ್ನ ಗೂಡಿನಲ್ಲಿ ಮರಿ ಇಟ್ಟಿದೆ ಎಂದು ಅದಕ್ಕೆ ಗೊತ್ತಾಗುವುದೇ ಇಲ್ಲ! ಕೋಗಿಲೆ ಸಹ ಕಾಗೆಯನ್ನು ಆಶ್ರಯಿಸಿ, ಮರಿ ಮಾಡುತ್ತದೆ ಅಲ್ಲವೆ! ಅದೇ ರೀತಿ, ಕೋಗಿಲೆ ಚಾಣವು, ಹರಟೆ ಮಲ್ಲ ಹಕ್ಕಿಯ ಗೂಡನ್ನು ಆಶ್ರಯಿಸುತ್ತವೆ. ಗೊತ್ತೇ ಇಲ್ಲದಂತೆ ಆತಿಥ್ಯ ವಹಿಸಿದ ಹಕ್ಕಿಯು, ಬೇರೆ ಪ್ರಭೇದದ ಹಕ್ಕಿಯ ಮರಿಗಳನ್ನು ತನ ಮರಿಗಳಂತೆಯೇ ಬೆಳೆಸುತ್ತದೆ. ಸಾಮಾನ್ಯವಾಗಿ ಮೊಟ್ಟೆಗಳು ಆತಿಥೇಯ ಹಕ್ಕಿಗಳ ಮೊಟ್ಟೆಗಳನ್ನೇ ಹೋಲುತ್ತದೆ. ಬೇರೆ ಹಕ್ಕಿಯ ಗೂಡಿನಲ್ಲಿ ಮೊಟ್ಟೆ ಇಡುವ ಹಕ್ಕಿಯು ಆ ಗೂಡನಲ್ಲಿರುವ ಆತಿಥೇಯ ಹಕ್ಕಿಗಳ ಮೊಟ್ಟೆಗಳನ್ನು ತಿನ್ನುವುದು ಅಥವಾ ಬೀಳಿಸುವುದೂ ಉಂಟು!

ಪರಾವಲಂಬಿ ಹಕ್ಕಿಯ ಮರಿಯು ಆತಿಥೇಯ ಹಕ್ಕಿಯ ಮರಿಯನ್ನು ಕೆಳಗೆ ಬೀಳಿಸಿ ಮಲತಾಯಿಯಿಂದ ಆಹಾರ ಪಡೆಯುತ್ತದೆ! ಒಟ್ಟಿನಲ್ಲಿ ಕೋಗಿಲೆ ಚಾಣ ಹಕ್ಕಿ ಮತ್ತು ಹರಟೆ ಮಲ್ಲ ಹಕ್ಕಿಯ ಬಾಂಧವ್ಯವು ಭಲೇ ಸೋಜಿಗದ್ದು!